FDP 22/2015
P.W.1

**ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 06-04-2018.**

<u>ಪಾಟೀ ಸವಾಲು ಶ್ರೀ ಎಂ.ಆರ್.ಎನ್ ವಕೀಲರಿಂದ :</u>

ನನ್ನ ತಾತನ ಹೆಸರು ಅರಸಶೆಟ್ಟಿ, ಸದರಿ ಅರಸಶೆಟ್ಟಿಗೆ ಎರಡು ಗಂಡು ನಾಲ್ಕು ಜನ ಹೆಣ್ಣು ಮಕ್ಕಳು. ಸದರಿ ನಾಲ್ಕು ಜನ ಹೆಣ್ಣು ಮಕ್ಕಳು ಜೀವಂತ ಇಲ್ಲ. ನನ್ನ ತಂದೆ ಪುಟ್ಟಶೆಟ್ಟಿ ಹಾಗೂ ನನ್ನ ದೊಡ್ಡಪ್ಪ ನಂಜಶೆಟ್ಟಿ, ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ನಡುವೆ ಮೌಖಿಕವಾಗಿ ಕೆಲವು ಆಸ್ತಿಗಳು ಭಾಗವಾಗಿದ್ದು, ಖಾತೆಯಾಗಿರುತ್ತದೆ.

ಅರಸಶೆಟ್ಟಿ ಬಿನ್ ಜವರಶೆಟ್ಟಿ ನನ್ನ ತಾತ ಎಂದರೆ ಸರಿ. ಸರ್ವೆ ನಂ.47/4 ರಲ್ಲಿ 20 ಗುಂಟೆ ನನ್ನ ತಾತ ಅರಸಶೆಟ್ಟಿಯ ಹೆಸರಿನಲ್ಲಿದ್ದು ಸದರಿ ಸ್ವತ್ತು ಈಗ ನನ್ನ ದೊಡಪ್ಪ ನಂಜಶೆಟ್ಟಿಯ ಹೆಂಡತಿ ಜಯಮ್ಮ ರವರ ಹೆಸರಿನಲ್ಲಿವೆ ಎಂದರೆ ಸರಿ.

ಪ್ರತಿವಾದಿ 2 ಮತ್ತು 3 ರವರಿಗೆ ಮೇಲ್ಕಂಡ ಅಸಲು ದಾವಾ ಸಂಖ್ಯೆ 680/2013 ರ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಅಂಚೆ ಇಲಾಖೆಯವರು ಹಾಗೂ ನ್ಯಾಯಾಲಯದ ಅಮೀನರ ಜೊತೆ ಶಾಮಿಲಾಗಿ ಈ ಕೇಸಿನ ವಿದ್ಯಾಮಾನಗಳನ್ನು ತಿಳಿಸದೇ ಸಮನ್ಸ್ ಗಳನ್ನು ಜಾರಿ ಮಾಡಿರುವುದಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮಹಜರ್ ಬಂದಿದ್ದಾರೆ ಎಂದು ವಿಚಾರ ತಿಳಿಸಿ ಸಹಿ ಪಡೆದು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನನ್ನ ಮದುವೆಗೆ 10 ಲಕ್ಷ ರೂಪಾಯಿ ಸಾಲ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಯೋಗಕ್ಷೇಮವನ್ನು 2 ನೇ ಪ್ರತಿವಾದಿ ಮತ್ತು ಆಕೆಯ ಗಂಡ ನೋಡಿಕೊಳುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜಯಮ್ಮ ರವರ ಮನೆಯಲ್ಲಿ ಹಾಗೂ ಇತರೆ ಕಡೆಗಳಲ್ಲಿ ಇರುತ್ತಾರೆ. ನಮ್ಮ ಕುಟುಂಬಕ್ಕೆ ಒಟ್ಟು 8 ಲಾಟು ಸ್ವತ್ತುಗಳು ಇತ್ತು ಎಂದರೆ ಸರಿಯಲ್ಲ.

ಕೋಡಿಬೆಳಗೊಳದ ಸರ್ವೆ ನಂ.56/5 ರಲ್ಲಿ ನನ್ನ ತಾತ ಅರಸಶೆಟ್ಟಿಯ ಹೆಸರಿಗೆ 32 ಗುಂಟೆ ಇದ್ದು, ಅದರಲ್ಲಿ ನನ್ನ ತಂದೆಗೆ ಹಾಗೂ ನನ್ನ ಚಿಕ್ಕಪ್ಪನಿಗೆ ಭಾಗಾಂಶದ ಹಕ್ಕು ಇದ್ದು, ಅದನ್ನು ಸೇರಿಸಿಲ್ಲ ಎಂದರೆ ಸೇರಿಸಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಅರ್ಧದಲ್ಲಿ ಸ್ವಾಧೀನದಲ್ಲಿದ್ದಾರೆ ಆದರೆ ಸದರಿ ಸ್ವತ್ತಿನ ದಾಖಲಾತಿ ನನ್ನ ತಂದೆ ಇಲ್ಲ ದೊಡ್ಡಪುಟ್ಟಯ್ಯ ರವರ ಹೆಸರಿನಲ್ಲಿ ಇದೆ.

ನನ್ನ ವಿರುದ್ಧ ಮೇಲ್ಕಂಡ ಒ.ಎಸ್ ನಂ.680/2013 ರ ಡಿಕ್ರಿಯನ್ನು ವಜಾ ಮಾಡಿ ಪುನರ್ ವಿಚಾರಣೆ ಮಾಡಿ ಅವಕಾಶ ಕೋರಿ ಮಿಸ್ ನಂ.25/2015 ನ್ನು ಸಲ್ಲಿದ್ದಾರೆ ಎಂದರೆ ಸರಿ. ನಾನು ಮತ್ತು ನನ್ನ ತಂದೆ 2 ಮತುತ 3 ನೇ ಪ್ರತಿವಾದಿಗಳಿಗೆ ಮೋಸ ಮಾಡುವ ಸಲುವಾಗಿ ಜಯಮ್ಮ ರವರ ಹಸೆರಿನಲ್ಲಿರುವ ಖಾತೆಯನ್ನು ಪ್ರಶ್ನಿಸದೆ ಹಾಗೂ ಸದರಿ ಸ್ವತನ್ನು ಹಾಗೂ ಸದರಿ ಜಯಮ್ಮ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೆ ಡಿಕ್ರಿ ಪಡೆದಿದ್ದೇನೆ ಎಂದರೆ ಸರಿಯಲ್ಲ . ಸರ್ವೆ ನಂ.56/5 ನ್ನು ಸಹ ಸೇರಿಸದೇ ಸದರಿ ಸ್ವತ್ತನ್ನು ಹೊಡೆದುಕೊಳ್ಳುವ ಸಲುವಾಗಿ ಸದರಿ ದೊಡ್ಡಪುಟ್ಟಯ್ಯ ರವರನ್ನು ಮೇಲ್ಕಂಡ

ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಡಿಕ್ರಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.ಸ.ಮಾ,

*(ಎಸ್.ಚಿನ್ನಸ್ವಾಮಿ)*
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ